ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**:- ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012 ರನ್ವಯ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ನಡೆಸಲು ಮತ್ತು ಡಿಜಿಟಲ್ ಪ್ರಮಾಣ ಪತ್ರವನ್ನು ನೀಡುವ ಕುರಿತು.

**ಓದಲಾಗಿದೆ**:- 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 34 ಇಆಇ 2012, ದಿನಾಂಕ:28-03-2014

2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 104 ಇಆಇ 2014, ದಿನಾಂಕ:02-12-2014

3. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರ ಕಡತ ಸಂಖ್ಯೆ: ಸಿಇಜಿ 11012/6/2019.

4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಯೋಜನೆ 2019, ದಿನಾಂಕ:26-04-2019

**ಪ್ರಸ್ತಾವನೆ**:-

ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ನ್ನು ರಚಿಸಲಾಗಿದ್ದು, ಕಾಲ ಕಾಲಕ್ಕೆ ಸದರಿ ನಿಯಮಗಳಿಗೆ ತಿದ್ದುಪಡಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಮಾಡಲಾಗಿರುತ್ತದೆ. ಸದರಿ ನಿಯಮಗಳು ದಿನಾಂಕ: 22-03-2012 ರಿಂದ ಜಾರಿಗೆ ಬಂದಿರುತ್ತದೆ. ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ 28-03-2014 ರ ಆದೇಶದಲ್ಲಿ ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ರಡಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್) ಕ್ಕೆ ನಡೆಸಲು ಅನುಮತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ದಿನಾಂಕ:02-12-2014 ರ ಆದೇಶದಲ್ಲಿ ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012 ರಡಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸುವ ಸಲುವಾಗಿ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್) ಪ್ರಸ್ತಾಪಿಸಿದ, ಪರೀಕ್ಷೆಗೆ ಒಳಗಾಗುವ ಪ್ರತಿ ಸರ್ಕಾರಿ ನೌಕರರಿಗಾಗಿ ಒಟ್ಟಾರೆ (ತಲಾ) ರೂ.295ರ ಈ ಕೆಳಗೆ ನಮೂದಿಸಿದ ದರಕ್ಕೆ ಅನುಮೋದನೆ ನೀಡಿ ಆದೇಶಿಸಲಾಗಿದೆ.

| | | |
|---|---|---|
| 1. | ಯಶಸ್ವಿ ಬಿಡ್‌ದಾರ ಸಂಸ್ಥೆಯಾದ ಮೆ॥ ಸಿಫಿ ಟೆಕ್ನಾಲಜೀಸ್ ಲಿಮಿಟೆಡ್ (M/s Sify Technologies Limited) ಪ್ರಸ್ತಾಪಿಸಿದ, ಸಂಧಾನ ದರ (negotiated rate) | ರೂ.270<br>(ರೂ.240ರ ದರ + 12.36 ಸೇವಾ ಕರ-ಒಟ್ಟು ರೂ.270) |
| 2. | ಪರೀಕ್ಷೆಗೆ ಒಳಗಾಗುವ ಪ್ರತಿ ಸರ್ಕಾರಿ ನೌಕರರಿಗಾಗಿ ಕಿಯಾನಿಕ್ಸ್‌ರ ಸೇವಾ ಶುಲ್ಕ (service charge) | ರೂ.25 |
| | ಒಟ್ಟು | ರೂ.295 |

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಏಕರೂಪ ಕಡತದಲ್ಲಿ ಮೆ॥ ಸಿಫಿ ಟೆಕ್ನಾಲಜೀಸ್ ಲಿಮಿಟೆಡ್ ಇವರು ನಡೆಸುತ್ತಿದ್ದ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯು ದಿನಾಂಕ:23-01-2019 ರಂದು ಸ್ಥಗಿತಗೊಂಡಿದ್ದು, ಪುನಃ ಪರೀಕ್ಷೆಯನ್ನು ಮುಂದುವರೆಸಲು ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನಲ್ಲಿ ಒಬ್ಬರು ಭಾಗವಹಿಸಿದ್ದ ಕಾರಣ ಪುನಃ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಈ ಕೆಳಕಂಡ ಏಜೆನ್ಸಿಗಳು ಭಾಗವಹಿಸಿರುತ್ತಾರೆ:

1) ಈಕ್ವಿಟಿ ಕ್ಯಾರಿಯರ್, ಟೆಕ್ನಾಲಿಜೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು

2) ಗಿಂಜರ್ ವೆಬ್ಸ್ ಪ್ರೈವೇಟ್ ಲಿಮಿಟೆಡ್, ನೊಯ್ಡ, ದೆಹಲಿ

3) ಸಿಸಾಯಿನ್ ಟೆಕ್ನಾಲಿಜೀಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು

4) ಟೆಕ್ ಕ್ಷೇತ್ರ ಇನ್ ಫೋ ಸೆಲ್ಯೂಷನ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು

ಭಾಗವಹಿಸಿದ ಟೆಂಡರ್‌ಗಳಲ್ಲಿ ಮೆ॥ ಟೆಕ್ ಕ್ಷೇತ್ರ ಇನ್ಫೋಸಲ್ಯೂಷನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರು ಎಲ್-1 ಆದ ಕಾರಣ ಸದರಿ ಸಂಸ್ಥೆಯನ್ನು ತಾಂತ್ರಿಕ ಸಮಿತಿ ಆಯ್ಕೆ ಮಾಡಿರುತ್ತಾರೆ. ಸರ್ಕಾರಿ ನೌಕರರಿಗೆ ಪ್ರತಿ ಪರೀಕ್ಷೆಗೆ ತಗಲುವ ವೆಚ್ಚ (cost per candidate per test) ನಮೂದಿಸಿದ ದರ ರೂ. 336.00 ಹಾಗೂ ನಂತರದ ಸಂಧಾನ ದರ ರೂ.334.00 ಎಂದು ಮತ್ತು ಪ್ರತಿ ಸರ್ಕಾರಿ ನೌಕರನಿಗೆ ಸೃಷ್ಟಿಸಿದ ಪ್ರತಿ ಡಿಜಿಟಲ್ ಪ್ರಮಾಣ ಪತ್ರಕ್ಕೆ ತಗಲುವ ವೆಚ್ಚ (cost per Digital Certificate generated) ರೂ.9.00 (ತೆರಿಗೆ ಸಹಿತ) ಎಂದು ಟೆಂಡರ್‌ನಲ್ಲಿ ನಮೂದಿಸಿದ್ದು, ಸದರಿ ದರವನ್ನು ತಾಂತ್ರಿಕ ಸಮಿತಿಯ ಸದಸ್ಯರು ಅನುಮೋದಿಸಿರುತ್ತಾರೆಂದು ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್ ಸಂಸ್ಥೆಯವರು ತಿಳಿಸಿರುತ್ತಾರೆಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರು ಕಡತದಲ್ಲಿ ಪ್ರಸ್ತಾಪಿಸಿರುತ್ತಾರೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಇವರ ಅಧ್ಯಕ್ಷತೆಯಲ್ಲಿ ದಿನಾಂಕ:03-09-2019ರ ನಡೆದ ಸಭೆಯಲ್ಲಿ ಟೆಂಡರ್ ಮೂಲಕ ಆಯ್ಕೆ ಮಾಡಲಾದ ಮೆ॥ ಟೆಕ್ ಕ್ಷೇತ್ರ ಇನ್ ಫೋ ಸೆಲ್ಯೂಷನ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಭರಿಸುವ ಸಾಮರ್ಥ್ಯ ಹೊಂದಿದ್ದು, ಈಗಾಗಲೇ ತೇರ್ಗಡೆಯಾಗಿರುವ 1,60,000 ಅಭ್ಯರ್ಥಿಗಳಿಗೆ ಹಾಗೂ ಮುಂದೆ ತೇರ್ಗಡೆ ಹೊಂದುವ ಸರ್ಕಾರಿ ನೌಕರರುಗಳಿಗೆ ಡಿಜಿಟಲ್ ಪ್ರಮಾಣ ಪತ್ರ ನೀಡಲು ಸಮರ್ಥರಿರುವುದಾಗಿ ಕಿಯೋನಿಕ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿರುತ್ತಾರೆಂದು, ಎಲ್ಲಾ ನೌಕರರುಗಳ ಮಾಹಿತಿಯನ್ನು ರಾಜ್ಯ ಮಾಹಿತಿ ಕೇಂದ್ರ, ಇ-ಆಡಳಿತ ಕೇಂದ್ರದಲ್ಲಿ ಇರಿಸುವಂತೆ ಹಾಗೂ ಕಿಯೋನಿಕ್ಸ್ ಸಂಸ್ಥೆಯವರ ಮೇನ್ ಫ್ರೇಮ್ ವೆಚ್ಚ ಅವಶ್ಯಕತೆ ಕಂಡು ಬರುವುದಿಲ್ಲವಾದ್ದರಿಂದ ಉಳಿದಂತೆ ಮೆ॥ ಟೆಕ್ ಕ್ಷೇತ್ರ ಇನ್ ಫೋ ಸೆಲ್ಯೂಷನ್ ಪ್ರೈವೆಟ್ ಲಿಮಿಟೆಡ್‌ನ ದರ ಪಟ್ಟಿಯನ್ನು ಅಂಗೀಕರಿಸಬಹುದೆಂದು ಮತ್ತು ಸಂಸ್ಥೆಗೆ ನೀಡಲು ಉದ್ದೇಶಿಸಿರುವ ಅವಧಿ 1 ವರ್ಷಕ್ಕೆ ಸೀಮಿತಗೊಂಡಿದ್ದು, ಅವಶ್ಯಕತೆ ಕಂಡು ಬಂದಲ್ಲಿ ಅದರ ಸಾಮರ್ಥ್ಯವನ್ನು ಪರಿಗಣಿಸಿ ಮತ್ತೊಂದು ವರ್ಷಕ್ಕೆ ವಿಸ್ತರಿಸಬಹುದಾಗಿದೆ ಎಂದು ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆಂದು ಏಕ ರೂಪ ಕಡತದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರು ತಿಳಿಸುತ್ತಾ, ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ರಡಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸಲು ಸರ್ಕಾರ ಆದೇಶ ನೀಡುವಂತೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ದಿನಾಂಕ:26-04-2019 ರ ಆದೇಶದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಗೆ ಸಂಬಂಧಿಸಿದ 2019-20 ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳನ್ನು ದಿನಾಂಕ:01-04-2019 ರಿಂದ ಮುಂದುವರೆಸಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಈ ಕಾರ್ಯಕ್ರಮಕ್ಕೆ ರೂ.200.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರು ಏಕ ರೂಪ ಕಡತದಲ್ಲಿ ಪ್ರಸ್ತಾಪಿಸಿರುತ್ತಾರೆ.

ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012ರ ನಿಯಮ (3) ರನ್ವಯ ಪ್ರತಿಯೊಬ್ಬ ಸರ್ಕಾರಿ ನೌಕರನು, ನಿಯಮ (1)ರ ಉಪ ನಿಯಮ (3)ರಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳನ್ನು ಹೊರತುಪಡಿಸಿ, ಇನ್ನಿತರ ಎಲ್ಲಾ ನೌಕರರಿಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಕರ್ನಾಟಕ ರಾಜ್ಯ ವಿದ್ಯುನ್ಮಾನ ನಿಗಮ ನಿಯಮಿತ (ಕಿಯೋನಿಕ್ಸ್) ದ ಮೂಲಕ ಮೆ॥ ಟೆಕ್ ಕ್ಷೇತ್ರ ಇನ್ ಫೋ ಸೆಲ್ಯೂಷನ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು ಇವರಿಂದ 1 ವರ್ಷದ ಅವಧಿಗೆ ಮಾತ್ರ ನಡೆಸಲು ಹಾಗೂ ಸರ್ಕಾರಿ ನೌಕರರ ಪ್ರತಿ ಪರೀಕ್ಷೆಗೆ ತಗಲುವ ವೆಚ್ಚ ರೂ.334.00 (ತೆರಿಗೆ ಸಹಿತ) ಮತ್ತು ಪ್ರತಿ ಸರ್ಕಾರಿ ನೌಕರರಿಗೆ ಸೃಷ್ಟಿಸಿದ